ಮೊರೆಯಿಟ್ಟಿತು.

ಅಲ್ಲದೆ, ಈ ಹೆಣ್ಣಿಗಾಗಿ ಇವೊತ್ತು ಸಮಯ ಹೊಂಚುವುದು ಹೇಗೆ? ಈ ಯೋಚನೆಯುಂಟಾಯಿತಷ್ಟೆ, ಮಧ್ಯಾಹ್ನದ ನಂತರದ ಕಮಿಟ್‌ಮೆಂಟುಗಳೆಲ್ಲ ಕಣ್ಣೆದುರು ಮೈಪಡೆದು ಥಕಪಕಿಸಿದವು... ಅಥವಾ, ದೆಹಲಿಯ ಬಿಡುವಿನಲ್ಲಿದ್ದಷ್ಟು ಸರಾಗವಾಗಿ, ಸ್ವತಂತ್ರವಾಗಿ, ಸ್ವಚ್ಛಂದವಾಗಿ ವಾರದ ಶುರುವಿನ ಮಧ್ಯಾಹ್ನವೊಂದು ಈ ಊರಿನಲ್ಲಿ ಆಗಿಬಂದೀತೆ? ಒಂದಲ್ಲ, ಎರಡಲ್ಲ... ನೂರು ಯೋಚನೆಗಳು ಎರಗೆರಗಿ ಎಡರಿತೊಡರಿದವು.

'ಯಾಕೆ? ಡೌಟಾ?' ಆದ್ರಾಳ ಈ ಮೆಸೇಜು ಬಂದಿದ್ದೇ, ಮತ್ತೂ ಹೌಹಾರಿದೆ. ಅಯ್ಯಯ್ಯೋ... ಬಂದಿರುವುದು ದಿಟವೆನಿಸುವ ಗಳಿಗೆ ಇಷ್ಟು ಹತ್ತಿರವೇ?! ಸುಳ್ಳಾಗಿರಲಪ್ಪಾ...!!

ಆರ್ತಯಿಸಿ ಮೊರೆಯಿಟ್ಟೆ.

ಹಿಂದೆಯೇ, ನನ್ನ ಮೊರೆಯೇ ಸುಳ್ಳೆನಿಸುವ ಹಾಗೆ ಒಂದಾದ ಮೇಲೊಂದು, ಒಟ್ಟು ಆರು ಸರ್ತಿ ವಾಟ್ಸ್‌ಆ್ಯಪು ಬೀಪಿಸಿತು!

ಒಂದೊಂದು ಸರ್ತಿಗೂ ಒಂದಾವರ್ತಿ ಎದೆ ಧಗ್ಗೆಂದಿತು.

ಹುಹ್ವ್... ರೆಸಿಡೆನ್ಸಿ ರೋಡಿನಲ್ಲಿದ್ದೆ. ಹಾಳು ಒನ್‌ವೇ ಬೇರೆ... ಆರ್ಭಟಿಸುವ ಟ್ರ್ಯಾಫಿಕ್ಕು... ಬಲು ಎಚ್ಚರದಿಂದ ಕಾರನ್ನು ಎಡಗಡೆಯ ಓಣಿಯೊಳಕ್ಕೆ ನುಗ್ಗಿಸಿ, ಸಂದಣಿ ಕಡಿಮೆಯಿದ್ದಲ್ಲಿ ತುಸುವೇ ವೇಗ ತಗ್ಗಿಸಿ, ಎಡಗೈಯಿಂದಲೇ ಮೊಬೈಲಿಗೆ ಪಾಸ್‌ವರ್ಡುಣಿಸಿದೆ. ಒಲ್ಲದ ಸತ್ಯವು ಒದ್ದೆದ್ದು ಮೂಡಿತು!

ಆದ್ರಾ, ಇದೇ ಊರಿನಲ್ಲಿದ್ದೇನೆಂಬ ಪುರಾವೆಗೆ ಚಿತ್ರಗಳನ್ನು ಪೋಸ್ಟಿಸಿದ್ದಳು... ಆರು ಸೆಲ್ಫಿಗಳು. ಒಂದೊಂದರಲ್ಲೂ ಬಲು ಪರಿಚಿತ ಹಿನ್ನೆಲೆ. ಅಂದರೆ ಬೆಂಗಳೂರೇ ಅನ್ನತಕ್ಕ ಚಹರೆ, ಚರ್ಯೆ, ಮೊಹರು.... ಇತ್ಯಾದಿ. ಒಂದೊಂದರಲ್ಲೂ ಮುಂದೆ ಗಾಗಲ್ಸು ತೊಟ್ಟು, ತನಗೆ ತಾನೇ ಹಲ್ಲರಳಿಸಿದ ಇವಳು! ಮೊದಲಿನ ಎರಡನ್ನು ಏರ್‌ಪೋರ್ಟಿನಲ್ಲಿ ಚಿತ್ರಿಸಿದ್ದಳು. ಏರ್‌ಪೋರ್ಟಿನೆದುರು ಅಲೆಯಂತೆ ಬಳುಕುವ ಬೆಳ್ಳನೆ ಛಾವಣಿಯ ನೇಪಥ್ಯವಿತ್ತು. ಒಂದರಲ್ಲಿ ಕ್ಲಿಕ್ಕು ಅದುರಿ ತುಸುವೇ ಮಸುಕಾಗಿತ್ತು. ಎರಡನೆಯದು ಚೆನ್ನಾದ ಫೋಕಸಿರುವಂಥದ್ದು. ಉಳಿದ ನಾಲ್ಕನ್ನು ಕಾರಲ್ಲಿ ಕುಳಿತು ತೆಗೆದಿದ್ದಳೇನೋ... ನಾಲ್ಕನೆಯದು ವಿಂಡ್ಸರ್ ಮ್ಯಾನರಿನ ಲಾಬಿ!

ಎದೆ ಮತ್ತೆ ಧಗ್ಗೆಂದಿತು. ಧಿಗ್ಗೆಂದಿತು. ಧಸಕ್ಕನೆ ಕುಸಿಯಿತು. ಪಾತಾಳಕ್ಕೇ ಇಳಿಯಿತೇನೋ... ಕುಸಿತ ಸಂಬಳಿಸುವಾಗ ನನ್ನ ಬೀಪಿಯೂ ಹೆಚ್ಚಿತನ್ನಿಸಿತು!

'ಎನಿ ಡೌಟ್ ನವ್ವ್?!' ಇನ್ನೂ ಒಂದು ಮೆಸೇಜು! ಪ್ರಶ್ನೆಯೊಟ್ಟಿಗೆ ಒಕ್ಕಣ್ಣು ತಾಳಿ ನಾಲಿಗೆ ಹೊರಗಿಕ್ಕಿದ ತುಂಟಮೋರೆಯಿತ್ತು!!

ಮುಂದೇನೆಂದು ತೋಚದಿರುವಾಗಲೇ, ಫೋನ್ ರಿಂಗಣಿಸಿತು. ಧ್ವನಿ ಶೇಖರಿಸಿ ಹೆಲೋ ಅಂತಂದೆ. ಜಾಗ್ರತೆಯಿಂದ 'ಕಮಿಟ್ಟ್' ಆಗೆಂದು ಜಾಗ್ರತೆಯೇ ಎಚ್ಚರಿಸಿತು. ಪೂರ್ತಾ ನಾಟಕವೇ ಮೊದಲಾಯಿತು.

'ನನಗೇ ಗೊತ್ತಿರಲಿಲ್ಲ, ಅಭೀ... ಆಫೀಸ್ ಹೊಕ್ಕಿದ್ದಷ್ಟೇ, ಬಾಸ್ ಕರೆದು ಈಗಿಂದೀಗಲೇ ಬೆಂಗಳೂರಿಗೆ ಹೋಗು ಅಂತ ಫರಮಾನು ಹೇಳಿದ... ಸೀದಾ ಹೊರಟುಬಂದೆ. ಟ್ರೈಡೆಂಟ್– ಟೆಕ್‌ನ ಎಮ್ಡೀ ಜೊತೆ ಮೀಟಿಂಗು. ಈಗಷ್ಟೇ ಮುಗೀತು... ಇಲ್ಲೇ ಹೋಟೆಲಿನಲ್ಲೇ... ಎಂಟು ಗಂಟೆಗೆ ರಿಟರ್ನ್ ಫ್ಲೈಟಿದೆ... ಐ ಕೆನ್ ಆಲ್ ಬಿ ಯುವರ್ಸ್ ನವ್ವ್... ಸಿಗುತೀಯಲ್ಲವಾ?